# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 71 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಡಾ|| ಎಂ. ಜಿ. ಮುಳೆ<br>(ವಿಧಾನ ಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 08.12.2025 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಸರ್ಕಾರವು ಪಡಿತರ ಮೂಲಕ ವಿತರಿಸಲು ಅಕ್ಕಿಯನ್ನು ಎಷ್ಟು ಬೆಲೆಗೆ ಖರೀದಿಸುತ್ತಿದೆ; (ವಿವರ ನೀಡುವುದು) | ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013 (NFSA) ರನ್ವಯ ಕೇಂದ್ರದಿಂ ದ 2,17,403 ಮೆ.ಟನ್ ಆಹಾರ ಧಾನ್ಯ ಪ್ರಮಾಣವನ್ನು ಉಚಿತವಾಗಿ ಬಿಡುಗಡೆಗೊಳಿಸುತ್ತಿದ್ದು ಕೇಂದ್ರ ವ್ಯಾಪ್ತಿ ಎನ್.ಎಫ್.ಎಸ್.ಎ ಫಲಾನುಭವಿಗಳಿಗೆ ಉಚಿತವಾಗಿ ಹಂಚಿಕೆ ನೀಡಲಾಗುತ್ತಿದೆ. ಪ್ರಸ್ತುತ ರಾಜ್ಯದಲ್ಲಿ 46.31ಲಕ್ಷ ಹೆಚ್ಚುವರಿ ಎನ್.ಎಫ್.ಎಸ್.ಎ ಆದ್ಯತಾ ಫಲಾನುಭವಿಗಳಿದ್ದು ಪ್ರತಿ ಫಲಾನುಭವಿಗೆ 05 ಕೆ.ಜಿ ಅಕ್ಕಿಯನ್ನು ಪ್ರತಿ ಮಾಹೆ ಹಂಚಿಕೆ ಮಾಡಲಾಗುತ್ತಿದೆ.<br>ಸರ್ಕಾರದ ಆದೇಶ ಸಂಖ್ಯೆ ಆನಾಸ 84 ಡಿಆರ್‌ಎ 2023, ದಿನಾಂಕ: 19-02-2025 ರನ್ವಯ ಫೆಬ್ರವರಿ 2025 ರ ಮಾಹೆಯಿಂದ ಅರ್ಹ ಪ್ರತಿ ಆದ್ಯತಾ ಫಲಾನುಭವಿಗೆ 05 ಕೆ.ಜಿ ಹೆಚ್ಚುವರಿ ಅಕ್ಕಿಯನ್ನು ವಿತರಿಸಲಾಗುತ್ತಿದ್ದು ಇದಕ್ಕೆ ಪ್ರತಿ ಮಾಹೆ ಅಗತ್ಯವಿರುವ ಅಂದಾಜು 2,25000 MT ಪ್ರಮಾಣದ ಅಕ್ಕಿಯನ್ನು ಭಾರತ ಆಹಾರ ನಿಗಮದಿಂದ ಮುಕ್ತ ಮಾರುಕಟ್ಟೆ ಮಾರಾಟ ಯೋಜನೆ (ಓಎಂಎಸ್‌ಎಸ್) ಅಡಿ ಪ್ರತಿ ಕ್ವಿಂಟಾಲ್ ಅಕ್ಕಿಗೆ ರೂ.2250/- ರಂತೆ ರಾಜ್ಯ ಸರ್ಕಾರವು ಖರೀದಿಸುತ್ತಿದೆ. |
| ಆ | ಕೇಂದ್ರ ಸರ್ಕಾರ ಕಡಿಮೆ ಬೆಲೆಗೆ ಅಕ್ಕಿ ನೀಡಿದರೂ ರಾಜ್ಯ ಸರ್ಕಾರ ಖರೀದಿಸದಿರಲು ಕಾರಣವೇನು; (ವಿವರ ನೀಡುವುದು) | ಕೇಂದ್ರ ಸರ್ಕಾರದ ಪತ್ರ ದಿನಾಂಕ:09.07.2024 ಮತ್ತು ಭಾರತೀಯ ಆಹಾರ ನಿಗಮದ 19.08.2024 ಪತ್ರದಂತೆ Open Market Sale Scheme OMSS(D) ಅಡಿ ಅಕ್ಕಿ ಖರೀದಿ ಯೋಜನೆಯನ್ನು ಪುನ: ಪ್ರಾರಂಭಿಸಲಾಗಿದ್ದು, ಸರ್ಕಾರದ ದಿನಾಂಕ 12.09.2024 ರ ಆದೇಶದಂತೆ ರಾಜ್ಯ |

| | | |
|---|---|---|
| | | ಎಎವೈ ಮತ್ತು ಪಿಹೆಚ್‌ಹೆಚ್ ಫಲಾನುಭವಿಗಳಿಗೆ ಅಗತ್ಯವಿರುವ ಹೆಚ್ಚುವರಿ 5 ಕೆ.ಜಿ ಅಕ್ಕಿಯನ್ನು OMSS(D ) ಅಡಿ ಪ್ರತಿ ಕ್ವಿಂಟಾಲ್‌ಗೆ ರೂ.2250/- ರ ದರದಲ್ಲಿ ಖರೀದಿಸಿ ಹಂಚಿಕೆ ಮಾಡಲಾಗುತ್ತಿದೆ. ಆದೇ ರೀತಿ ರಾಜ್ಯ NFSA ಫಲಾನುಭವಿಗಳಿಗೆ ಅಗತ್ಯವಿರುವ ಅಕ್ಕಿ ಪ್ರಮಾಣವನ್ನು ಸಹ OMSS(D) ಅಡಿ ಖರೀದಿಸಿ ಹಂಚಿಕೆ ನೀಡಲಾಗುತ್ತಿದೆ. |
| ಇ | ಕಳೆದ ಎರಡು ವರ್ಷಗಳಲ್ಲಿ ಸರ್ಕಾರವು ಕೇಂದ್ರ ಸರ್ಕಾರದಿಂದ ಎಷ್ಟು ಪ್ರಮಾಣದಲ್ಲಿ ಅಕ್ಕಿ ಖರೀದಿಸಿದೆ ಪ್ರತಿ ಕೆ.ಜಿ.ಗೆ ಎಷ್ಟು ಮೊತ್ತ ಪಾವತಿಸಿದೆ? (ವಿವರ ನೀಡುವುದು) | ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013 (NFSA) ರನ್ವಯ ಕೇಂದ್ರದಿಂದ ಪ್ರತಿ ಮಾಹೆ 2,17,403 ಮೆ.ಟನ್ ಎನ್.ಎಫ್.ಎಸ್.ಎ ಆಹಾರ ಧಾನ್ಯ ಪ್ರಮಾಣವನ್ನು ಉಚಿತವಾಗಿ ಬಿಡುಗಡೆಗೊಳಿಸುತ್ತಿದೆ. ಸದರಿ ಪ್ರಮಾಣವನ್ನು ಕೇಂದ್ರ ವ್ಯಾಪ್ತಿ ಎನ್.ಎಫ್.ಎಸ್.ಎ ಫಲಾನುಭವಿಗಳಿಗೆ ಉಚಿತವಾಗಿ ಹಂಚಿಕೆ ನೀಡಲಾಗುತ್ತಿದೆ.<br>ರಾಜ್ಯ ಫಲಾನುಭವಿಗಳಿಗೆ ಅಗತ್ಯವಿರುವ ಅಕ್ಕಿ ಪ್ರಮಾಣ ಮತ್ತು ಅನ್ನಭಾಗ್ಯ ಯೋಜನೆಯಡಿ ಅಗತ್ಯವಿರುವ ಅಕ್ಕಿ ಪ್ರಮಾಣವನ್ನು ಕೇಂದ್ರ ಸರ್ಕಾರದ Open Market Sale Scheme OMSS(D) ಅಡಿ ಭಾರತ ಆಹಾರ ನಿಗಮದಿಂದ ನಿಗಧಿತ ಮೊತ್ತ ಪಾವತಿಸಿ ಖರೀದಿಸಲಾಗುತ್ತಿದ್ದು, ಕೇಂದ್ರ ಸರ್ಕಾರದಿಂದ ನೇರವಾಗಿ ಆಹಾರ ಧಾನ್ಯ ಖರೀದಿಸಿರುವುದಿಲ್ಲ. |

ಇ-ಆನಾಸ 303 ಡಿಆರ್‌ಎ 2025

(ಕೆ.ಹೆಚ್. ಮುನಿಯಪ್ಪ)

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ

ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ

ಇಲಾಖಾ ಸಚಿವರು